**ಓ.ಎಸ್. ನಂ. 516/2013 ಪಿ.ಡಬ್ಲೂ-1 ಹೆಸರು - ಪರ್ವಿನ್ ತಾಜ್**

**ಸಾಕ್ಷಿಯನ್ನು ದಿನಾಂಕಃ 19/08/2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ. ಎಂ.ಜೆ.ಎಸ್. ಪ್ರತಿವಾದಿ 1, 2 ಮತ್ತು 20 ಪರ ವಕೀಲರಿಂದಃ-**

ನಾನು ನನ್ನ ತಾತ ಯಾಕುಬ್ ಖಾನ್ ರವರ ಸ್ವತ್ತಿನಲ್ಲಿ ಭಾಗ ಕೇಳುತ್ತಿದ್ದೇನೆ. ಯಾಕುಬ್ ಖಾನ್ ಮೃತಪಟ್ಟು ಸುಮಾರು 60 ವರ್ಷ. ಯಾಕುಬ್ ಖಾನ್ ರವರಿಗೆ 5 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು. ಯಾಕುಬ್ ಖಾನ್ ರವರ 8 ಜನ ಮಕ್ಕಳು ಈಗ ಮೃತಪಟ್ಟಿರುತ್ತಾರೆ. ನಾನು ಯಾಕುಬ್ ಖಾನ್ ರವರ ಮಗ ಗೌಸ್ ಖಾನ್ ರವರ ಮಗಳು. ಯಾಕುಬ್ ಖಾನ್ ರವರ ಎಲ್ಲಾ ಮೊಮ್ಮಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಎಲ್ಲರನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಯಾಕುಬ್ ಖಾನ್ ರವರು ಸಾಯುವ ಕಾಲಕ್ಕೆ ಅವರಿಗೆ 13 ಎಕರೆ ಜಮೀನು, ಮನೆ ಮತ್ತು ಖಾಲಿ ಜಾಗ ಇತ್ತು. ಯಾಕುಬ್ ಖಾನ್ ರವರು ಹೆಸರಿಗಿದ್ದ ಆಸ್ತಿಗಳ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಯಾಕುಬ್ ಖಾನ್ ರವರು ಅವರ ಮಗ ಅಜೀಜ್ ಖಾನ್ ರವರ ಜೊತೆಯಲ್ಲಿ ಇದ್ದು ಯಾಕುಬ್ ಖಾನ್ ರವರ ಆಸ್ತಿಗಳನ್ನು ಅಜೀಜ್ ಖಾನ್ ರವರು ಮಾರಿದ್ದಾರೆ ಎಂದು ನುಡಿಯುತ್ತಾರೆ. ಅಜೀಜ್ ಖಾನ್ ರವರು ಮಾರಾಟ ಮಾಡಿದ್ದಾರೆ ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ತೋರಿಸಿಲ್ಲ. ನಾನು ಹಾಜರುಪಡಿಸಿರುವ ನಿಪಿ-1 ರಿಂದ ನಿಪಿ-8 ಪಹಣಿ ಪತ್ರಿಕೆಗಳು ಯಾಕುಬ್ ಖಾನ್ ರವರ ಹೆಸರಿನಲ್ಲಿ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಯಾಕುಬ್ ಖಾನ್ ರವರು ನನ್ನ ತಂದೆಗೆ 1 ಎಕರೆ 21 ಗುಂಟೆಯನ್ನು ನೀಡಿದ್ದರು. ನನ್ನ ತಂದೆ ಸಾಯುವ ಕಾಲಕ್ಕೆ ತನಗೆ 1 ಎಕರೆ 23 ಗುಂಟೆ ಜಮೀನನ್ನು ನನ್ನ ತಂದೆ ನೀಡಿದ್ದು ಅದನ್ನು ನ್ಯಾಯಾಲಯಕ್ಕೆ ಹೋಗಿ ಪಡೆಯುವಂತೆ ಹೇಳಿದ್ದರು. ನನ್ನ ತಂದೆಗೆ ಯಾಕುಬ್ ಖಾನ್ ರವರು 1 ಎಕರೆ 21 ಗುಂಟೆ ಕೊಟ್ಟು ಸುಮಾರು 50 ವರ್ಷ ಆಗಿದೆ, ಸಾಕ್ಷಿ ಮುಂದುವರೆದು ನಮಗೆ ಸ್ವಾಧೀನ ನೀಡದೆ ಅವರೇ ಉಳುಮೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

ಯಾಕುಬ್ ಖಾನ್ ರವರು ಮೃತಪಟ್ಟ ನಂತರ ಅವರ ಮಕ್ಕಳು ಪ್ರತ್ಯೇಕವಾಗಿ ಅವರವರ ಭಾಗವನ್ನು 50 ವರ್ಷ ದಿಂದ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ನನ್ನ ತಂದೆಗೆ 1 ಎಕರೆ 21 ಗುಂಟೆಯನ್ನು ಸರ್ವೆ ನಂಬರ್ 33 ರಲ್ಲಿ ಕೊಟ್ಟಿದ್ದರು. ನನ್ನ ತಂದೆಯ ಹೆಸರಿಗೆ ಪಹಣಿ ಪತ್ರಿಕೆ ದಾಖಲಾಗಲಿಲ್ಲ. ನಾನು ದೊಡ್ಡಕವಲಂದೆಯಲ್ಲಿ ಇದ್ದೇನೆ. ನನ್ನ ತಂದೆಗೆ ಕೊಟ್ಟಿದ್ದ 1 ಎಕರೆ 21 ಗುಂಟೆಯಲ್ಲಿ ನಾನು ಉಳುಮೆ ಮಾಡಿಸುತ್ತಿದ್ದೇನೆ. ಪಹಣಿ ಪತ್ರಿಕೆಯನ್ನು ನನ್ನ ಹೆಸರಿಗೆ ಮಾಡಿಸಿಕೊಳ್ಳಲು ಪ್ರಯತ್ನಿಸಿಲ್ಲ.

ಸರ್ವೆ ನಂಬರ್ 33/1 ಎ ರಲ್ಲಿನ 2 ಎಕರೆ 9 ಗುಂಟೆಯನ್ನು 1962 ರಲ್ಲಿ ನನ್ನ ತಾತ ಯಾಕುಬ್ ಸಾಬ್ ಅವರ ಮಗಳು ರೆಹೆಮತ್ ಬೀ ಯಮ್ಮಾ ರವರಿಗೆ ದಾನ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ರೆಹೆಮತ್ ಬೀ ರವರು 1994 ರಲ್ಲಿ 1 ನೇ ಪ್ರತಿವಾದಿ ಸತ್ತಾರ್ ಖಾನ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಮೋಸ ಮಾಡಿ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂಬರ್ 1 ರ ಖಾತೆಯು 1994 ರಿಂದ 1 ನೇ ಪ್ರತಿವಾದಿಯ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ. ಸದರಿ ಖಾತೆಯನ್ನು ಪ್ರಶ್ನಿಸಿ ಯಾವುದೇ ಅರ್ಜಿ ಸಲ್ಲಿಸಿಲ್ಲ.

ದಾವಾ ಐಟಂ ನಂಬರ್ 2 ಸರ್ವೆ ನಂಬರ್ 33/1 ಬಿ ರಲ್ಲಿ 2 ಎಕರೆ 4 ಗುಂಟೆ 1 ನೇ ಪ್ರತಿವಾದಿಯ ಹೆಸರಿನಲ್ಲಿ 1998 ರಿಂದ ಬರುತ್ತಿದೆ ಎಂದರೆ ಸರಿ. ಸದರಿ ಖಾತೆಯನ್ನು ಪ್ರಶ್ನಿಸಿ ನಾನು ಯಾವುದೇ ಅರ್ಜಿ ಸಲ್ಲಿಸಿಲ್ಲ. ದಾವಾ ಐಟಂ ನಂಬರ್ 2 ಆಸ್ತಿಯನ್ನು 1 ನೇ ಪ್ರತಿವಾದಿಯು ಖಲಂದರ್ ಖಾನ್ ಮತ್ತು ಅವರ ಸಹೋದರರಿಂದ ಖರೀದಿಸಿದ್ದಾರೆ ಎಂದರೆ ಸರಿ.

ದಾವಾ ಐಟಂ ನಂಬರ್ 3 ಸರ್ವೆ ನಂಬರ್ 33/2 ರಲ್ಲಿ 30 ಗುಂಟೆ ಯನ್ನು 2 ನೇ ಪ್ರತಿವಾದಿಯು ಸನ್ 2000 ಇಸವಿಯಲ್ಲಿ ಖಮರುನ್ನಿಸ್ಸಾ ರವರಿಂದ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸಾಕ್ಷಿಯು ಅದರಲ್ಲಿ ನಮಗೆ 2 ಗುಂಟೆ ಜಮೀನು ಬರಬೇಕು ಎಂದು ನುಡಿಯುತ್ತಾರೆ. ಉಳಿದ 28 ಗುಂಟೆ ನನಗೆ ಸಂಬಂಧವಿಲ್ಲ.

ದಾವಾ ಐಟಂ ನಂಬರ್ 4 ಮತ್ತು 5 ಸರ್ವೆ ನಂಬರ್ 7/1 ಎ ಮತ್ತು 7/1 ಬಿ 20 ನೇ ಪ್ರತಿವಾದಿ ಯ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ನನ್ನ ತಾತ ಯಾಕುಬ್ ಖಾನ್ 1960 ರಲ್ಲಿ ಅಜೀಜ್ ಖಾನ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಐಟಂ ನಂಬರ್ 5 ರಿಂದ 8 ಆಸ್ತಿಗಳು ಯಾಕುಬ್ ಖಾನ್ ರವರ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ.

ಮಹಮದ್ದೀಯಾ ಸಂಪ್ರದಾಯದಲ್ಲಿ ಒಟ್ಟು ಕುಟುಂಬ ಎಂಬ ಪರಿಕಲ್ಪನೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತ ತೀರಿಕೊಂಡ ನಂತರ ನನ್ನ ತಂದೆ ವಿಭಾಗ ಕೋರಿ ದಾವೆ ಸಲ್ಲಿಸಿಲ್ಲ ಕವಲಂದೆ ನಾಡ ಕಛೇರಿಗೆ ಖಾತೆ ಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿದ್ದರು. ನನ್ನ ತಂದೆ ತೀರಿಕೊಂಡು 8 ವರ್ಷವಾಯಿತು. ಸುಮಾರು 10 ವರ್ಷಗಳ ಹಿಂದೆ ಅವರು ನಾಡಕಛೇರಿಗೆ ಅರ್ಜಿ ಸಲ್ಲಿಸಿದ್ದರು. ಆ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ನಾಡಕಛೇರಿಗೆ ನೀಡಿದ್ದ ಅರ್ಜಿಯ ಮೇಲೆ ಏನು ಆದೇಶ ಆಗಿದೆ ಎಂದು ನನಗೆ ಗೊತ್ತಿಲ್ಲ.

ನನ್ನ ತಾತ ಯಾಕುಬ್ ಖಾನ್ ಅವರ ಜೀವಿತ ಅವಧಿಯಲ್ಲಿ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ, ದಾನ ನೀಡಿದ್ದಾರೆ ಎಂದರೆ ಸರಿಯಲ್ಲ. ಆ ಪ್ರಕಾರ ಕ್ರಯಕ್ಕೆ ಪಡೆದವರು ಮತ್ತು ದಾನ ಸ್ವೀಕರಿಸಿದವರು ಆಸ್ತಿಗಳ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ನಾನು ಬೇರೆಯವರ ಮಾತನ್ನು ಕೇಳಿ ಆಸ್ತಿಯ ಬೆಲೆ ಜಾಸ್ತಿಯಾಗಿರುವುದರಿಂದ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆ ಸಲ್ಲಿಸಲು ಹಕ್ಕಿಲ್ಲ ಮತ್ತು ಈ ದಾವೆ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**